## ಗೂಢಾರ್ಥದ ಶಿಲ್ಪ



ವಿಜಯನಗರ ಸಾಮ್ರಾಜ್ಯದ ಹಂಪಿಗೆ ಭೇಟಿ ನೀಡುವ ಪ್ರವಾಸಿಗರು ಅನೇಕ ಸ್ಮಾರಕಗಳನ್ನು ನೋಡಿರುತ್ತಾರೆ. ಆದರೆ, ಸಾಕಷ್ಟು ಪ್ರಚಾರವಿಲ್ಲದ 'ಗುಮ್ಮಟ ದ್ವಾರ'ವನ್ನು ಬಹಳಷ್ಟು ಪ್ರವಾಸಿಗರು ನೋಡಿರುವುದಿಲ್ಲ. ಕಮಲಾಪುರದಿಂದ ಸುಮಾರು ಎರಡು ಕಿಲೋಮೀಟರ್ ದೂರದಲ್ಲಿರುವ ಗುಮ್ಮಟ ದ್ವಾರವನ್ನು ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಹಂಪಿಯ ಇತರೆ ರಚನೆಗಳಿಗಿಂತಲೂ ವಿಭಿನ್ನ ವಾಸ್ತುಶಿಲ್ಪ ರಚನೆ ಇದಾಗಿದೆ. ಗುಮ್ಮಟಾಕಾರದ ದ್ವಾರವು ಹಂಪಿಯಲ್ಲಿರುವ ರಾಯಲ್ ಸೆಂಟರ್‌ಗೆ ಪ್ರಮುಖ ದ್ವಾರವಾಗಿತ್ತಂತೆ. ಈ ದ್ವಾರದ ಕಾವಲುಗಾರನಿಗಾಗಿ ನಿರ್ಮಿಸಿರುವ ಕೊಠಡಿಯಲ್ಲಿ ಆಳೆತ್ತರದ ಹನುಮಂತನ ವಿಗ್ರಹವಿದ್ದರೆ, ಒಳಾಂಗಣ ಗೋಡೆಯಲ್ಲಿ ಹಲವು ಉಬ್ಬು ಶಿಲ್ಪಗಳಿವೆ. ಅವುಗಳ ಪೈಕಿ ಉಬ್ಬುಶಿಲ್ಪವೊಂದು ಪ್ರವಾಸಿಗರ ಗಮನ ಸೆಳೆಯುತ್ತದೆ. ಅದನ್ನು ಮೀನೆನ್ನಬೇಕೊ, ಆನೆಯೆನ್ನಬೇಕೊ ಅಥವಾ ಹದ್ದೆನ್ನಬೇಕೊ ಗೊತ್ತಾಗುವುದಿಲ್ಲ. ಉಬ್ಬುಶಿಲ್ಪದ ಸಮೀಪಕ್ಕೆ ಹೋಗಿ ನೋಡಿದಾಗ ಎರಡು ಪ್ರಾಣಿಗಳ ಮತ್ತು ಪಕ್ಷಿಯ ಅಂಗಗಳ ಸಂಯುಕ್ತ ಶಿಲ್ಪವನ್ನು ಕಾಣಬಹುದು. ಆನೆಯ ಮುಖ, ಮೀನಿನ ದೇಹ ಮತ್ತು ಹದ್ದಿನ ಕಾಲುಗಳನ್ನು ಹೊಂದಿರುವ ಈ ಶಿಲ್ಪ ಭೂಚರ, ಜಲಚರ ಮತ್ತು ವಾಯುಚರಗಳ ಸಂಯುಕ್ತ ಶಿಲ್ಪವಾಗಿದ್ದು, ಇದರ ಗೂಢಾರ್ಥವೇನೆಂದು ಸ್ಪಷ್ಟವಾಗಿ ತಿಳಿದಿಲ್ಲ. ಹಸು–ಆನೆ, ಹಸು–ಹಸು ಹೀಗೆ ಎರಡು ಪ್ರಾಣಿಗಳ ಸಂಯುಕ್ತಶಿಲ್ಪಗಳು ಹಲವೆಡೆ ಕಾಣಸಿಗುತ್ತವೆಯಾದರೂ ಭೂಚರ, ಜಲಚರ ಮತ್ತು ವಾಯುಚರ ಪ್ರಾಣಿಗಳ ಅಂಗಗಳ ಸಂಯುಕ್ತಶಿಲ್ಪ ಎಲ್ಲಿಯೂ ನೋಡಲು ಸಿಗುವುದಿಲ್ಲ.

–ಜಿ. ನಾಗೇಂದ್ರ, ಕಾವೂರು, ಸಂಡೂರು

## ಅಕ್ಷರದಲ್ಲಿ ಮೂಡಿದ ಗಣಪ

ನೋಡಿದಾಕ್ಷಣ ಇದು ಗಣೇಶ ಚಿತ್ರ ಎಂದು ಗೊತ್ತಾಗುತ್ತದೆ. ಆದರೆ ಇದು ರಚಿತವಾದ ವಿಧಾನವು ತಕ್ಷಣಕ್ಕೆ ಗೋಚರವಾಗದು. ಚಿತ್ರವನ್ನು ಸೂಕ್ಷ್ಮವಾಗಿ ನೋಡಿದರೆ ಅದರಲ್ಲಿ ಅಕ್ಷರಗಳು ಗೋಚರಿಸುತ್ತವೆ. ಅದೂ ಚಂದ್ರಯಾನ 3ರ ಕುರಿತಾದ ಅಕ್ಷರಗಳು. ಚಂದ್ರಯಾನ 3ರ ಯಶಸ್ಸಿನಿಂದ ಇಡೀ ಜಗತ್ತು ಭಾರತದತ್ತ ನೋಡುವಂತಾಗಿದೆ. ಇಸ್ರೋದ ವಿಜ್ಞಾನಿಗಳ ಅಭೂತಪೂರ್ವವಾದ ಸಾಧನೆಯನ್ನು ಎಲ್ಲೆಡೆ ಸಂಭ್ರಮಿಸಲಾಗುತ್ತಿದೆ. ಬೆಳಗಾವಿ ಜಿಲ್ಲೆಯ ಮೂಡಲಗಿಯ ಎಸ್.ಎಸ್.ಆರ್. ಪ್ರೌಢಶಾಲಾ ಚಿತ್ರಕಲಾ ಶಿಕ್ಷಕ ಸುಭಾಷ ಕುರಣೆ ಅವರು ಅಕ್ಷರಗಳ ಮೂಲಕ ಗಣೇಶನ ಚಿತ್ರ ಬಿಡಿಸಿ ಇಸ್ರೋ ಸಾಧನೆಯನ್ನು ಶ್ಲಾಘಿಸಿದ್ದಾರೆ.



'ಚಂದ್ರಯಾನ 3 ಯಶಸ್ವಿ ಭಾರತ ಐತಿಹಾಸಿಕ ಸಾಧನೆ' ಎಂಬ ಅಕ್ಷರಗಳನ್ನು ಬಳಸಿ ಗಣೇಶನ ಚಿತ್ರ ಬಿಡಿಸುವುದರ ಮೂಲಕ ತಮ್ಮ ಚಿತ್ರಕಲಾ ಪ್ರತಿಭೆಯನ್ನು ಮೆರೆದಿದ್ದಾರೆ. ಚಿತ್ರದಲ್ಲಿ ಮುಡಿಯಿಂದ ಅಡಿಯವರೆಗೆ ಚಿತ್ತ ಹರಿಸಿದರೆ ಅಕ್ಷರಗಳು ಕಾಣುತ್ತವೆ. ಸುಭಾಷ ಕುರಣೆ ಅವರು ಅಕ್ಷರದಲ್ಲಿ ಚಿತ್ರ ಬಿಡಿಸುವುದು ಇದೇ ಮೊದಲಲ್ಲ. ಕಳೆದ ಒಂದೂವರೆ ದಶಕದಿಂದ ಅಕ್ಷರ ಬಳಸಿ ತರಹೇವಾರಿ ಚಿತ್ರ ಬಿಡಿಸಿದ್ದಾರೆ. ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ಡಾ. ಎಸ್. ರಾಧಾಕೃಷ್ಣನ್, ಮಹಾತ್ಮ ಗಾಂಧಿ ಜಯಂತಿಗೆ ಗಾಂಧೀಜಿ ಚಿತ್ರ, ಸ್ವಾಮಿ ವಿವೇಕಾನಂದರ ಜಯಂತಿಗೆ ವಿವೇಕಾನಂದರ ಚಿತ್ರ, ಬಸವ ಜಯಂತಿಗೆ ಬಸವೇಶ್ವರ ಚಿತ್ರ ಬಿಡಿಸಿದ್ದಾರೆ. ಅಷ್ಟೇ ಅಲ್ಲದೆ ಶಿಕ್ಷಣ ಇಲಾಖೆಯ ಶೈಕ್ಷಣಿಕ ಯೋಜನೆಗಳಾದ ಅಕ್ಷರ ದಾಸೋಹ, ಚಿಣ್ಣರ ಅಂಗಳ, ಮರಳಿ ಬಾ ಶಾಲೆಗೆ, ನಲಿಕಲಿ ಇವುಗಳನ್ನೆಲ್ಲ ಅಕ್ಷರಗಳನ್ನು ಬಳಸಿ ಚಿತ್ರ ಬಿಡಿಸಿ ಶಿಕ್ಷಣ ಇಲಾಖೆಯಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಅವರ ಕಲೆಗೆ ಹಲವಾರು ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ.

–ಬಾಲಶೇಖರ ಬಂದಿ, ಮೂಡಲಗಿ

## ಅಜ್ಜಿಯ ವ್ಯಾಯಾಮದ ಗದೆ

ಅಜ್ಜಿ ಮನೆಯ ಅಟ್ಟ ಹತ್ತಿದಾಗ ದೊಣ್ಣೆಯಂತಹ ವಸ್ತು ಕಣ್ಣಿಗೆ ಬಿತ್ತು. ಮೊದಲ ಬಾರಿಗೆ ಅದನ್ನು ನೋಡಿದ ನಾನು ಇದು ಜಟ್ಟಿಗಳು ಬಳಸುವ ವ್ಯಾಯಾಮದ ಗದೆ ಆಗಿರಬಹುದೇ? ಅಥವಾ ಯಕ್ಷಗಾನದಲ್ಲಿ ಬಳಸುವ ಇಂದ್ರನ ವಜ್ರಾಯುಧ ಆಗಿರಬಹುದೇ? ಎಂದು ನನ್ನೊಳಗೇ ಪ್ರಶ್ನೆ ಹಾಕಿಕೊಂಡೆ. ಹಾಗೇ ಅದನ್ನು ಅಟ್ಟದಿಂದ ಕೆಳಕ್ಕೆ ತಂದೆ.

ತುಂಬಾ ಭಾರ ಮತ್ತು ಗಾತ್ರದಲ್ಲಿ ದೊಡ್ಡದಾಗಿರದ ಕಾರಣ ಈ ಸಲಕರಣೆಯನ್ನು ವಿಶಾಲಕಾಯ ಜಟ್ಟಿಗಳು ಬಳಸಲು ಸಾಧ್ಯವೇ? ಗೊತ್ತಿಲ್ಲ. ಈ ಬಗ್ಗೆ ಅಜ್ಜಿಯನ್ನು ಕೇಳಿದಾಗ, ಅವರು ತನ್ನ ಹಲ್ಲುಗಳು ಉದುರಿದ ಬಾಯನ್ನು ತೆರೆದು ಗೊಳ್ ಎಂದು ಜೋರಾಗಿ ನಕ್ಕರು. ಬಳಿಕ, 'ಇದು ಜಟ್ಟಿಗಳು ಬಳಸುವ ಗದೆಯಲ್ಲ. ನಾನು ದಿನಾ ವ್ಯಾಯಾಮ ಮಾಡಲು ಬಳಸುತ್ತಿದ್ದ ಗದೆ' ಎಂದರು. ಅಜ್ಜಿ ವ್ಯಾಯಾಮ ಮಾಡುತ್ತಿದ್ದ ಬಗ್ಗೆ ಕೇಳಿ ಆಶ್ಚರ್ಯವಾಯಿತು. ನೀವಾ ಎಂಬ ಪ್ರಶ್ನೆಯನ್ನೂ ಅವರ ಮುಂದಿಟ್ಟೆ. ಅದಕ್ಕವರು, 'ಇಲ್ಲ ಮಗಾ... ಬಟ್ಟೆಯನ್ನು ತೊಳೆಯಲು ಇದನ್ನು ನಾನು ಬಳಸುತ್ತಿದ್ದೆ. ಇದರಿಂದ ಬಟ್ಟೆಯನ್ನು ಚೆನ್ನಾಗಿ ಜಜ್ಜಿ ಕೊಳೆ ತೆಗೆಯಬಹುದಾಗಿತ್ತು' ಎಂದರು. ನಾನೂ ನಕ್ಕು ಸುಮ್ಮನಾದೆ.

–ಬಿ. ಶಶಾಂಕ ಪೈ, ಉಡುಪಿ

